ಶ್ರೀ ಎಂ. ವಿ. ರಾಮರಾವ್.—ಏಟು ಯಾರಿಗೆ ಬಿದ್ದಿಹೆ, ಯಾರಿಗೆ ಬಿದ್ದಿಲ್ಲ, ಈ ವಿಷಯಗಳ ಬಗ್ಗೆ ವರದಿ ಕೋರ್ಟಿನ ಮುಂದಿದೆ. ಆಪಾದನೆಗಳು ಮತ್ತು ಪ್ರತಿಯಾಪಾದನೆಗಳನ್ನು ಮಾಡಿರುವ ಸಲುವಾಗಿ ಜುಡಿಷಿಯರ್ ಎನ್‌ಕ್ವೈರಿ ಮಾಡಬೇಕೆಂದೇ ಅದು ಕೋರ್ಟಿನ ಮುಂದೆ ಇದೆ.

Mr. SPEAKER.—What is the meaning of judicial enquiry ? Any enqury in a judidial court is a judicial enquiry,

ಶ್ರೀ ಎಸ್. ಗೋಪಾಲಗೌಡ.—ಈಗ ಪೋಲೀಸಿನವರು ಕೊಟ್ಟ ವರದಿಯ ಆಧಾರದ ಮೇಲೆ ಗೃಹಸಚಿವರು ಉತ್ತರ ಹೇಳುತ್ತಿದ್ದಾರೆ. ಇನ್ಸ್‌ಪೀಸೆಂಟ್ ಪರ್ಸನ್ಸ್ ಮೇಲೆ ಕೇಸುಗಳನ್ನು ಹಾಕಿಲ್ಲ, ತಪ್ಪು ಮಾಡದೆ ಇರುವವರನ್ನು ಯಾರನ್ನೂ ಪೋಲೀಸ್ ಸ್ಟೇಷನ್ನಿಗೆ ಕರೆದುಕೊಂಡು ಹೋಗಿಲ್ಲವೆಂದು ಹೇಳುತ್ತಾರೆ. ನಾವು ಕೇಳಿದ್ದು, ಈಗ ಪೋಲೀಸ್‌ನವರ ವರದಿ ಆಧಾರದಮೇಲೆ ಕೊಡುವ ಉತ್ತರ ಪನ್ನೂ, ಅವರ ವರದಿಯನ್ನೂ, ನಮ್ಮ ಅಭಿಪ್ರಾಯಗಳನ್ನೂ ತೆಗೆದುಕೊಂಡು, ಒಬ್ಬ ನ್ಯಾಯಾಧಿಕಾರಿ ಬಾಗೇಪಲ್ಲಿಗೆ ಹೋಗಿ ವಿಚಾರಮಾಡಿದರೆ ಅದನ್ನು ಜುಡಿಷಿಯಲ್ ಎನ್‌ಕ್ವೈರಿ ಎಂದು ಹೇಳುತ್ತೇವೆ. ಅದನ್ನು ಬಿಟ್ಟು ಇವರು ಕೋರ್ಟಿಗೆ ಹೋಗಿರುವುದು ಜುಡಿಷಿಯರ್ ಎನ್‌ಕ್ವೈರಿ ಆಗುತ್ತದೆಯೆ ? ಆದ್ದರಿಂದ ನಾನು ಹೇಳಿದಹಾಗೆ ಮಾಡಿಸುವುದಕ್ಕೆ ಸಾಧ್ಯವೆ ?

Mr. SPEAKER.—I am not allowing any supplementary. Members are consuming time in discussing merits.

Irrigation dam Across Varada River

*Q.—445. Sri B. R. PATIL (Hangal).—

Will the Minister for Public Works be pleased to state :—

(*a*) the nature of Irrigation work to be constructed across the right side of Varada river from Gondi to Seegihalli in Hangal Taluk, Dharwar District and the details of Plan and estimates for such construction ;

(*b*) whether the previous estimates have shown that proposed irrigation scheme near Seegihalli would be prohibitively costly and that there is no suitable site for taking up any irrigation works across the said Varada river at any place between Gondi and Seegihalli in Hangal Taluk ;

(*c*) whether Government is aware that an irrigation dam work can be taken up across Varada river, near Basi-Banawasi in Sirsi Taluk in Karwar District to irrigate lands in Sorab, Hangal and Haveri Taluks ?

A.—Sri VEERENDRA PATIL (Minister for Public Works).—

(*a*) There are no such proposals.
(*b*) Yes.
(*c*) Not feasible.

ಶ್ರೀ ಬಿ. ಆರ್. ಪಾಟೀರ್.—ಸ್ವಾಮಿ, ಈ ಪ್ರಶ್ನೆಯ ಬಿ. ಮತ್ತು ಸಿ. ಗೆ ಕೊಟ್ಟ ಉತ್ತರದಲ್ಲಿ ಹೀಗು ಮತ್ತು ಸೂಕ್ತವಲ್ಲ ಎಂದು ಹೇಳಿದ್ದೀರಿ. ಇದನ್ನು ಸ್ವಲ್ಪ ವಿವರವಾಗಿ ತಿಳಿಸಿದರೆ ಒಳ್ಳೆಯದಲ್ಲವೆ ?

ಶ್ರೀ ವೀರೇಂದ್ರಪಾಟೀರ್.—ಈಗ ಅದನ್ನು ರಫ್‌ಆಗಿ ಸರ್ವೆ ಮಾಡಿದ್ದಾರೆ. ಅದು ಬಹಳಕಷ್ಟ ಹೆಚ್ಚು ಫಲವತ್ತಾದ ಜಮೀನು ಮುಳುಗಡೆಯಾಗುತ್ತದೆ, ಆದ್ದರಿಂದ ಫೀಜಬಲ್ ಇದು ಆಲ್ಲ ಎಂದು ಹೇಳಿದ್ದಾರೆ.

ಶ್ರೀ ಬಿ. ಆರ್. ಪಾಟೀಲ್.—ಗೊಂಡಿಯಿಂದ ಸೀಗೇಹಳ್ಳಿಗೆ ವರದಾನದಿಯಿಂದ ಯಾವ ಯೋಜನೆಯನ್ನು ತೆಗೆದುಕೊಳ್ಳುವುದಿಲ್ಲ ಎಂದು ಸರ್ಕಾರಕ್ಕೆ ಅಭಿಪ್ರಾಯ ಬಂದಿದೆಯೇ ?

ಶ್ರೀ ವೀರೇಂದ್ರಪಾಟೀಲ್.—ಗೊಂಡಿಯಿಂದ ಸೀಗೆಹಳ್ಳಿಗೆ ಯಾವ ಪ್ರಾಜೆಕ್ಟನ್ನೂ ತೆಗೆದು ಕೊಳ್ಳುವುದಕ್ಕೆ ಉತ್ತಮವಾದ ಸ್ಕೆಟು ಇಲ್ಲ ಎಂದು ತಿಳಿದುಬಂದಿದೆ.

ಶ್ರೀ ಸಿದ್ದಯ್ಯಕಾತಿಮಠ್.—ಈ ವರದಾನದಿಯು ಗದಗ್, ಹಾವೇರಿ, ಶಿರಹಟ್ಟಿ, ಹಾನಗಲ್ ಈ ಪ್ರದೇಶಗಳಲ್ಲಿ ಹರಿಯುತ್ತದೆ. ಆದ್ದರಿಂದ ಈ ಪ್ರದೇಶಗಳಲ್ಲಿ ಎಲ್ಲಾದರೂ ಒಂದು ಅಣೆಕಟ್ಟನ್ನು ಕಟ್ಟುವುದಕ್ಕೆ ಏನಾದರೂ ಸರ್ಕಾರದವರು ಆಲೋಚನೆ ಮಾಡಿದ್ದೀರಾ ?

ಶ್ರೀ ವೀರೇಂದ್ರಪಾಟೀಲ್.—ಅನೇಕ ಕಡೆ ಸರ್ವೆ ಮಾಡಿದ್ದಾರೆ. ಆದರೆ ಖರ್ಚು ಹೆಚ್ಚಾಗುತ್ತದೆ, ಮತ್ತು ಫಲವತ್ತಾದ ಭೂಮಿ ಹೆಚ್ಚು ಮುಳುಗಡೆಯಾಗುತ್ತದೆ ಎಂದು ವರದಿ ಬಂದಿದೆ. ಮಾನ್ಯ ಸದಸ್ಯರು ಹೇಳಿದಹಾಗೆ, ಅಲ್ಲಿ ಬೇಕಾದಷ್ಟು ನೀರು ಇದೆ. ಅಲ್ಲಿ ಲಿಫ್ಟ್ ಇರಿಗೇಷನ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುವುದಕ್ಕೆ ಸಾಕಷ್ಟು ಅವಕಾಶ ಇದೆ.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಸೊರಬ, ಅನವಟ್ಟಿ ಮತ್ತು ಜಡೇಹೋಬಳಿ ಈ ಪ್ರದೇಶಗಳು ವರದಾನದಿಯ ದಡದಲ್ಲಿವೆ. ಈ ಪ್ರದೇಶಗಳು ಯಾವಾಗಲೂ ಕ್ಷಾಮ ಪೀಡಿತ ಪ್ರದೇಶ ಎಂದು ಸರ್ಕಾರದ ಗಮನಕ್ಕೂ ಬಂದಿದೆ. ವರದಾ ನದಿಯಲ್ಲಿ ಹೆಚ್ಚು ನೀರು ಸಿಕ್ಕುತ್ತದೆ. ಆದ್ದರಿಂದ ಆ ಪ್ರದೇಶದಲ್ಲಿ ಒಂದು ಅಣೆಕಟ್ಟನ್ನು ಕಟ್ಟಿ ಆ ಪ್ರದೇಶದ ಜನಗಳಿಗೆ ಇರಿಗೇಷನ್ ಫೆಸಿಲಿಟೀಸನ್ನು ಒದಗಿಸಿಕೊಡುವ ಆಲೋಚನೆ ಸರ್ಕಾರಕ್ಕೆ ಇದೆಯೇ ?

ಶ್ರೀ ವೀರೇಂದ್ರಪಾಟೀಲ್.—ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಆ ಸ್ಥಳವನ್ನು ಪರಿಶೀಲನೆ ಮಾಡಿ ಆ ಯೋಜನೆಯ ಎಸ್ಟಿಮೇಟ್ ತಯಾರು ಮಾಡಿ ಬಹಳ ಖರ್ಚಾಗುತ್ತದೆ ಎಂದು ಗೊತ್ತಾಗಿದೆ. ಅಲ್ಲಿ ಲಿಫ್ಟ್ ಇರಿಗೇಷನ್ ಮುಖಾಂತರ ನೀರಾವರಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ಸಾಕಷ್ಟು ಅವಕಾಶವಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ವರದಾನದಿಯು ಹರಿಯುವ ಕಡೆ ಫ್ಲಡ್ ಕಂಟ್ರೋಲ್ ಮಾಡುವ ಉದ್ದೇಶದಿಂದಾಗಲೀ, ಇದಕ್ಕೆ ಅಣೆಕಟ್ಟನ್ನು ಕಟ್ಟಿ ಬೇರೆ ಬೇರೆ ತಾಲ್ಲೂಕುಗಳಿಗೆ ನೀರಾವರಿ ಸೌಕರ್ಯವನ್ನು ಒದಗಿಸುವ ಉದ್ದೇಶದಿಂದಾಗಲೀ ಸಾಗರ ತಾಲ್ಲೂಕಿನಲ್ಲಿ ಯಾವುದಾದರೂ ಅಣೆಕಟ್ಟನ್ನು ಕಟ್ಟುವ ಉದ್ದೇಶದಿಂದ ಅಲ್ಲಿ ಸರ್ವೆ ಮಾಡಿದ್ದೀರಾ ?

ಶ್ರೀ ವೀರೇಂದ್ರಪಾಟೀಲ್.—ಅದು ಸಾಗರ ತಾಲ್ಲೂಕಿಗೆ ಬರುತ್ತದೋ ಇಲ್ಲವೋ ಗೊತ್ತಿಲ್ಲ. ಬನವಾಸಿಯ ಹತ್ತಿರ ಅದನ್ನು ಕಟ್ಟಬೇಕೆಂದು ಪರಿಶೀಲನೆ ಮಾಡುತ್ತಿದ್ದೇವೆ.

Sri A. R. BADRINARAYAN.—The Minister was pleased to say that putting up lift irrigation would be considered. Has the Government any lift irrigation scheme in view for the Sorab and Sagar Taluks where the Varada River runs ?

Sri VEERENDRA PATIL.—I cannot say off hand. I said that there is plenty of water in this river and that it is possible to lift this water and irrigate lands. Wherever it is feasible to take up lift irrigation schemes, it will be considered.

ಶ್ರೀ ಸಿದ್ದಯ್ಯಕಾತಿಮಠ್.—ಬನವಾಸಿಯ ಹತ್ತಿರ ಅಣೆಕಟ್ಟನ್ನು ಕಟ್ಟಬೇಕೆಂಬ ಉದ್ದೇಶ ಇದೆಯೆಂದು ಹೇಳಿದಿರಿ. ಅದರ ಎಸ್ಟಿಮೇಟು ಎಷ್ಟು, ಅಲ್ಲಿ ಎಷ್ಟು ನೀರು ನಿಲ್ಲುತ್ತದೆ ?

ಶ್ರೀ ವೀರೇಂದ್ರಪಾಟೀಲ್.— ಆ ಇನ್‌ಫರ್‌ಮೇಷನ್ ಈಗ ನನ್ನ ಹತ್ತಿರ ಇಲ್ಲ. ಬೇಕಾದರೆ ಮಾನ್ಯಸದಸ್ಯರಿಗೆ ತರಿಸಿಕೊಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಬನವಾಸಿಯ ಹತ್ತಿರ ಆ ಅಣೆಕಟ್ಟನ್ನು ಕಟ್ಟಬೇಕೆಂದು ಯೋಚಿಸ ರಾಗಿದೆ ಎಂದು ಹೇಳಿದ್ದೀರಿ, ಹಾಗಾದರೆ ಅದರ ಎಸ್ಟಿಮೇಟು ಎಷ್ಟು, ಎಷ್ಟು ವಿಸ್ತೀರ್ಣ ನೀರಾವರಿಯಾಗುತ್ತದೆ, ಮತ್ತು ಯಾವ ಯಾವ ಕಡೆಗೆ ಅದು ಹರಡುತ್ತದೆ ?

ಶ್ರೀ ವೀರೇಂದ್ರಪಾಟೀಲ್.—ಆ ತಪಶೀಲು ಈಗ ನನ್ನಹತ್ತಿರ ಇಲ್ಲ.